## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 733 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ. ಎಸ್ ಅರುಣ<br>(ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21-08-2026 |
| ಉತ್ತರಿಸುವ ಸಚಿವರು | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

** * **

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಇತ್ತೀಚೆಗೆ ಬೆಂಗಳೂರಿನ ವಿವಿಧ ಹೊಟೇಲ್‌ಗಳು ಹಾಗೂ ಸ್ಟಾರ್ ಹೊಟೇಲ್‌ಗಳ ಮೇಲೆ ಆಹಾರ ಸುರಕ್ಷತಾ ಮತ್ತು ಔಷಧ ಆಡಳಿತ ಇಲಾಖೆಯಿಂದ ನಡೆಸಿದ ತಪಾಸಣೆಯಲ್ಲಿ ಅವಧಿ ಮೀರಿದ ಆಹಾರ ಪದಾರ್ಥಗಳ ಕೊಳೆತ ಮಾಂಸ, ತರಕಾರಿಗಳು ಹಾಗೂ ಅಸ್ವಚ್ಛ ಅಡುಗೆಮನೆಗಳು ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕಳೆದ ಒಂದು ವರ್ಷದಲ್ಲಿ ಬೆಂಗಳೂರಿನಲ್ಲಿ ಒಟ್ಟು ಎಷ್ಟು ಹೊಟೇಲ್‌ಗಳನು ತಪಾಸಣೆ ಮಾಡಲಾಗಿದೆ. ಎಷ್ಟು ಉಲ್ಲಂಘನೆಗಳು ಪತ್ತೆಯಾಗಿವೆ ಹಾಗೂ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ. | ಬಂದಿದೆ.<br><br>ಕಳೆದ ಒಂದು ವರ್ಷದಲ್ಲಿ ಬೆಂಗಳೂರಿನಲ್ಲಿ ಒಟ್ಟು 565 ಹೊಟೇಲ್/ ರೆಸ್ಟೋರೆಂಟ್‌ಗಳು / ಕ್ಯಾಟರಿಂಗ್ ಗಳನ್ನು ತಪಾಸಣೆ ಮಾಡಲಾಗಿದೆ.<br><br>ಒಟ್ಟು 565 ಹೊಟೇಲ್/ ರೆಸ್ಟೋರೆಂಟ್‌ಗಳು / ಕ್ಯಾಟರಿಂಗ್ ನಲ್ಲಿ 21 ಹೊಟೇಲ್/ರೆಸ್ಟೋರೆಂಟ್‌ಗಳು/ ಕ್ಯಾಟರಿಂಗ್‌ಗಳಲ್ಲಿ ನಿಯಮ ಉಲ್ಲಂಘನೆಯಾಗಿರುವುದು ಪತ್ತೆಯಾಗಿರುತ್ತದೆ.<br><br>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಹಾಗೂ ನಿಬಂಧನೆಗಳು 2011ರಡಿಯಲ್ಲಿ ಅಸುರಕ್ಷಿತ, substandard, ಮತ್ತು ಅಸ್ವಚ್ಛ ಅಡುಗೆ ಮನೆಗಳು ಕಂಡುಬಂದ ಹಿನ್ನಲೆಯಲ್ಲಿ 21 ಹೊಟೇಲ್‌ಗಳು ಮೇಲೆ ಅಪರ ಜಿಲ್ಲಾಧಿಕಾರಿಗಳ/ JMFC ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. |
| 2 | ಇತ್ತೀಚಿನ ತಪಾಸಣೆಯಲ್ಲಿ ವಶಪಡಿಸಿಕೊಂಡಿರುವ ಅವಧಿ ಮೀರಿದ ಹಾಗೂ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕಾರಕ ಆಹಾರ ಪದಾರ್ಥಗಳ ಪ್ರಮಾಣ, ಅಂದಾಜು ಮೌಲ್ಯ ವಿವರ ನೀಡುವುದರ ಜೊತೆಗೆ ಸಂಬಂಧಪಟ್ಟ ಹೊಟೇಲ್‌ಗಳ ವಿರುದ್ಧ ಕೈಗೊಂಡಿರುವ ಕಾನೂನು ಕ್ರಮಗಳೇನು? | ತಪಾಸಣೆಯಲ್ಲಿ 1040 kg ಅವಧಿ ಮೀರಿದ ಹಾಗೂ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕಾರಕ ಆಹಾರ ಪದಾರ್ಥಗಳನು ವಶಪಡಿಸಿಕೊಳ್ಳಲಾಗಿರುತ್ತದೆ. ಅದರ ಅಂದಾಜು ಮೌಲ್ಯ ರೂ.4.69 ಲಕ್ಷಗಳಾಗಿರುತ್ತದೆ.<br><br>ಸಂಬಂಧಪಟ್ಟ ಹೊಟೇಲ್‌ಗಳ ವಿರುದ್ಧ ಉತ್ತಮೀಕರಣ ನೋಟೀಸ್ ಅನು ಜಾರಿ ಮಾಡಲಾಗಿರುತ್ತದೆ ಹಾಗು 23 ಹೊಟೇಲ್‌ಗಳ ವಿರುದ್ಧ ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಶಿಫಾರಸ್ಸು ಮಾಡಲಾಗಿದೆ. |
| 3 | ಬೆಂಗಳೂರಿನ ಹೊಟೇಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಆಹಾರ ಪೂರೈಕೆ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸುವ ಗೋದಾಮು, ಕೋಲ್ಡ್ ಸ್ಟೋರೆಜ್ ಮತ್ತು ಆಹಾರ ವಿತರಣಾ ಕೇಂದ್ರಗಳಲ್ಲಿಯೂ ಅವಧಿ ಮೀರಿದ ಅಥವಾ ಗುಣಮಟ್ಟ ಕಳಪೆಯಾದ ಆಹಾರ ಪದಾರ್ಥಗಳು ಪೂರೈಕೆಯಾಗುತ್ತಿವೆಯೇ ಎಂಬುದನು ಪರಿಶೀಲಿಸಿ ಸರ್ಕಾರ ಯಾವುದೇ ವಿಶೇಷ ತಪಸಣಾ ಕಾರ್ಯಚರಣೆ ಕೈಗೊಂಡಿದೆಯೇ; ಹೌದಾದಲ್ಲಿ ಅದರ ಫಲಿತಾಂಶವೇನು? | ಹೌದು.<br><br>ಆಹಾರ ಸುರಕ್ಷತಾ ಇಲಾಖಾವತಿಯಿಂದ 30 ವಿಶೇಷ ತಪಸಣಾ ತಂಡವನ್ನು ರಚಿಸಿ ಕಾರ್ಯಾಚರಣೆ ಕೈಗೊಳ್ಳಲಾಗಿದೆ. 8 ಘಟಕಗಳಿಗೆ ತಪಾಸಣೆ ಮಾಡಿ 4 ಗೋದಾಮುಗಳಿಗೆ ಉತ್ತಮೀಕರಣ ನೋಟಿಸ್ ಅನು ಜಾರಿ ಮಾಡಲಾಗಿರುತ್ತದೆ. ಸದರಿ 4 ಗೋದಾಮುಗಳ ವಿರುದ್ಧ ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಶಿಫಾರಸ್ಸು ಮಾಡಲಾಗಿದೆ. |

| | | |
|---|---|---|
| 4 | ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವ ಹೊಟೇಲ್‌ಗಳ ವಿರುದ್ಧ ಕೇವಲ ನೋಟಿಸ್ ಅಥವಾ ದಂಡ ವಿಧಿಸುವ ಬದಲು, ಪುನರಾವರ್ತಿತ ಉಲ್ಲಂಘನೆ ಮಾಡುವ ಹೊಟೇಲ್‌ಗಳ ಪರವಾನಿಗೆ ಅಮಾನತ್ತು/ರದ್ದುಪಡಿಸುವುದು ಹಾಗೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಯಾವ ವ್ಯವಸ್ಥೆಯನ್ನು ಜಾರಿಗೆ ತಂದಿದೆ? | ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವ ಹೊಟೇಲ್‌ಗಳ ವಿರುದ್ಧ ಕೇವಲ ನೋಟಿಸ್ ಅಥವಾ ದಂಡ ವಿಧಿಸುವ ಬದಲು, ಪುನರಾವರ್ತಿತ ಉಲ್ಲಂಘನೆ ಮಾಡುವ ಹೊಟೇಲ್‌ಗಳ ಪರವಾನಿಗೆ ಅಮಾನತ್ತು/ರದ್ದುಪಡಿಸುವುದು ಹಾಗೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕಠಿಣ ಕ್ರಮ ಕೈಗೊಳ್ಳಲು ಆಹಾರ ಸುರಕ್ಷತೆ ಗುಣಮಟ್ಟ ಕಾಯ್ದೆ 2006ರ ಸೆಕ್ಷನ್ 64ರಲ್ಲಿ ಈ ಬಗ್ಗೆ ಪುನರಾವರ್ತಿತ ಅಪರಾಧ ನ್ಯಾಯಾಲಯದಲ್ಲಿ ಸಾಬೀತಾದಲ್ಲಿ ಪರವಾನಗಿ ಅಮಾನತ್ತು/ರದ್ದುಪಡಿಸಲು ಅವಕಾಶವಿರುತ್ತದೆ. |
| 5 | ಬೆಂಗಳೂರಿನಂತಹ ಜನಸಂಖ್ಯೆ ಹೆಚ್ಚಿರುವ ನಗರದಲ್ಲಿ ಹೊಟೇಲ್‌ಗಳು ರೆಸ್ಟೋರೆಂಟ್ ಗಳು ಮತ್ತು ಕ್ಲೌಡ್ ಕಿಚನ್ ಗಳಲ್ಲಿ ಆಹಾರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತುತ ಇರುವ ಆಹಾರ ಸುರಕ್ಷತಾ ಅಧಿಕಾರಿಗಳ ಸಂಖ್ಯೆ ಅಗತ್ಯವಿರುವ ಅಧಿಕಾರಿಗಳ ಸಂಖ್ಯೆ ಹಾಗೂ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬೆಂಗಳೂರು ನಗರದಲ್ಲಿ ಒಟ್ಟು 24 ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 15 ಆಹಾರ ಸುರಕ್ಷತಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಖಾಲಿ ಇರುವ 9 ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗಳಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಆಹಾರ ಸುರಕ್ಷತಾಧಿಕಾರಿಗಳನ್ನು ಕಾರ್ಯವ್ಯವಸ್ಥೆ ಮೇರೆಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.<br><br>ಮುಂದುವರೆದು, ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಸರ್ಕಾರದ ಆದೇಶ ಸಂಖ್ಯೆ: HFW 306 CGE 2022, ದಿನಾಂಕ:09.07.2026ರಲ್ಲಿ ರಾಜ್ಯಾದ್ಯಂತ 59 ಆಹಾರ ಸುರಕ್ಷತಾಧಿಕಾರಿಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. |
| 6 | ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿರುವುದು ಅಧಿಕೃತ ತಪಾಸಣೆಯಲ್ಲಿ ದೃಢಪಟ್ಟಿರುವ ಹೊಟೇಲ್‌ನ ಹೆಸರು, ವಿಳಾಸ, ಉಲ್ಲಂಘನೆಯ ವಿವರ, ವಿಧಿಸಿರುವ ದಂಡ ಹಾಗೂ ಪರವಾನಗಿ ಸ್ಥಿತಿಯನ್ನು ಒಳಗೊಂಡ ಸಾರ್ವಜನಿಕವಾಗಿ ಲಭ್ಯವಿರುವ ಲೈನ್ ಪಟ್ಟಿ (Public Disclosure) ಯನ್ನು ನಿಯಮಿತವಾಗಿ ನವೀಕರಿಸಿ, ಪ್ರಕಟಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಸಂಬಂಧಪಟ್ಟ ಆಹಾರ ಉದ್ದಿಮೆದಾರರ ವಿರುದ್ಧ ಉತ್ತಮೀಕರಣ ನೋಟೀಸ್ ಅನ್ನು ಜಾರಿ ಮಾಡಲಾಗಿರುತ್ತದೆ ಹಾಗೂ 23 ಹೋಟೆಲ್‌ಗಳಿಗೆ ನೋಟಿಸ್ ಜಾರಿ ಮಾಡಲಾಗಿದ್ದು ವಿಚಾರಣೆಗೆ ಕರೆಯಲಾಗಿದೆ. ವಿಚಾರಣೆ ಮುಗಿದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.<br><br>ಮುಂದುವರೆದು ಆಹಾರ ಉದ್ದಿಮೆದಾರರ ವಿರುದ್ಧ ಹೂಡಲಾದ ಪ್ರಕರಣಗಳು ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ವಿಧಿಸಿರುವ ದಂಡ ಹಾಗೂ ಪರವಾನಗಿ ಸ್ಥಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಲು ಇಲಾಖಾವತಿಯಿಂದ ಪತ್ರಿಕಾ ಪ್ರಕಟಣೆ ಹೊರಡಿಸಲಾಗುತ್ತದೆ. |

ಸಂಖ್ಯೆ: HFW 93 SBV 2026.

(ಯು.ಟಿ. ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.